ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಲಯ ,
ಶ್ರೀರಂಗಪಟ್ಟಣ

ಸಿ.ಸಿ. 1201 /2022

| | |
|---|---|
| ಸಿ.ಡಬ್ಲ್ಯೂ : | 2 |
| ಪಿ.ಡಬ್ಲ್ಯೂ : | 2 |

| | | |
|---|---|---|
| ಸಾಕ್ಷಿದಾರರ ಹೆಸರು | : | ಸಂಜಯ್ |
| ತಂದೆಯ ಹೆಸರು | : | ಸ್ವಾಮಿ |
| ವಯಸ್ಸು | : | 27 ವರ್ಷ |
| ವೃತ್ತಿ | : | ಗಾರೆ ಕೆಲಸ |
| ವಾಸ | : | ಚಿಕ್ಕೇಗೌಡನಕೊಪ್ಪಲು |

**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕ: 24.03.2026**

**ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದ**

ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ಮೃತ ರವಿಕಿರಣ್ ಅಲಿಯಾಸ್ ಜಾಕಿ ಗೊತ್ತು. ಈಗ್ಗೆ ಸುಮಾರು 5 ವರ್ಷಗಳ ಹಿಂದೆ ನಾನು ಮತ್ತು ಸದರಿ ರವಿಕಿರಣ್ ರವರು ಶ್ರೀರಂಗಪಟ್ಟಣದ ಪಂಪ್ ಹೌಸ್ ನಿಂದ ಬೆಳಗೊಳದ ಕಡೆಗೆ ರಾತ್ರಿ 8.30 ಸಮಯದಲ್ಲಿ ಚಾಸಾ.6 ರವರಿಗೆ ಸೇರಿದ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ಆರೋಪಿ ತನ್ನ ಕಾರನ್ನು ಒವರ್ ಟೇಕ್ ಮಾಡಲು ಹೋಗಿ ಜೋರಾಗಿ ಬಂದು ನಾವು ಹೋಗುತ್ತಿದ್ದ ದ್ವಿಚಕ್ರ ವಾಹನಕ್ಕೆ ಅಪಘಾತ ಪಡಿಸಿರುತ್ತಾರೆ. ಸದರಿ ಅಪಘಾತದಲ್ಲಿ ನನ್ನ ತಲೆಗೆ ಗಾಯಗಳಾಗಿರುತ್ತವೆ. ಸದರಿ ಅಪಘಾತದಿಂದ ರವಿಕಿರಣ್ ರವರಿಗೆ ಮೂಗು ಮತ್ತು ಬಾಯಿಯಲ್ಲಿ ರಕ್ತ ಬರುತ್ತಿತ್ತು. ನಂತರ ಸದರಿ ಸ್ಥಳದಲ್ಲಿ ಇದ್ದ ಜನರು ನನ್ನನ್ನು ಮತ್ತು ಸದರಿ ರವಿಕಿರಣ್ ರವರನ್ನು ಅಂಬ್ಯೂಲೆನ್ಸ್ ನಲ್ಲಿ ಮೈಸೂರಿನ ಕೆ.ಆರ್.ಆಸ್ಪತೆರಗೆ ಚಿಕಿತ್ಸೆಗೆ ಕಳುಹಿಸಿರುತ್ತಾರೆ. ಸದರಿ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಸದರಿ ರವಿಕಿರಣ್ ಚಿಕಿತ್ಸೆಫಲಕಾರಿಯಾಗದೆ

ಮೃತಪಟ್ಟಿರುತ್ತಾನೆ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಎಸ್.ವಿ ವಕೀಲರಿಂದ**

ನಾನು ಮತ್ತು ಮೃತ ರವಿಕಿರಣ್ ರವರು ಒಂದೇ ಊರಿನವರು ಎಂದರೆ ಸರಿ. ನಾನು ಮತ್ತು ರವಿಕಿರಣ್ ರವರು ಗಾರೆ ಕೆಲಸ ಮಾಡಿಕೊಂಡು ಹೋಗುವಾಗ ನಾವು ಮತ್ತು ನಮ್ಮ ಸ್ನೇಹಿತರು ಎಣ್ಣೆ ಪಾರ್ಟಿ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನನಗೆ ಮತ್ತು ಸದರಿ ರವಿಕಿರಣ್ ರವರಿಗೆ ಮದ್ಯಪಾನ ಮಾಡುವ ಅಭ್ಯಾಸ ಇತ್ತು ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ನನ್ನ ತಲೆಗೆ ಗಾಯ ಆಗಿದ್ದರಿಂದ ಆಗ ನನಗೆ ಪ್ರಜ್ಞೆ ತಪ್ಪಿತ್ತು ಎಂದರೆ ಸರಿ. ಅಪಘಾತ ಆಯಿತು ಎಂದು ಹೇಳಲಾದ ಸ್ಥಳ ಆಶಾ ಡಾಬಾದ ಹತ್ತಿರ ಆಗಿರುತ್ತದೆ. ಸದರಿ ಅಪಘಾತದಿಂದ ನಾವು ಹೋಗುತ್ತಿದ್ದ ಬೈಕ್ ಎಡಭಾಗಕ್ಕೆ ಬಿದ್ದಿರುತ್ತದೆ. ಸದರಿ ಅಪಘಾತದಿಂದ ನನ್ನ ತಲೆಯ ಮತ್ತು ಕತ್ತಿನ ಎಡಭಾಗಕ್ಕೆ ಗಾಯಗಳಾಗಿರುತ್ತವೆ.

ಸದರಿ ಸದರಿ ಅಪಘಾತ ಸದರಿ ರವಿಕಿರಣ್ ರವರ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಕಾರು ವೇಗವಾಗಿ ನಮ್ಮ ಬೈಕಿಗೆ ಡಿಕ್ಕಿಪಡಿಸಿದ ನಂತರ ನಾವು ಸದರಿ ಸ್ಥಳದಲ್ಲಿಯೇ ಬಿದ್ದಿರುತ್ತೇವೆ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಆಲಿಸಿ ಮುಂದೂಡಲಾಯಿತು)

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.